ಜೊತೆ ಮಾತನಾಡುತ್ತಿದ್ದಾರೆ... 'ಹೇಗಿದ್ದೀಯ? ಎಲ್ಲಿದ್ದೆ? ಅಂತ ಅಲ್ಲ... ಏನು ಹೇಳ್ತೀಯ?' ಅಂತ... ಏನು ಹೇಳಲಿ? ಪಿಳಿ ಪಿಳಿ ನೋಡಿದೆ. ಒಮ್ಮೆಲೇ ನನ್ನ ಮನಸ್ಸು ನಿರ್ವಿಕಾರವಾಯಿತು. ಅಮ್ಮ ಹೇಳಿದರು, 'ನೀ ಪಳ್ಳಿಯೇ ಇದ್ದರೂ ಈ ಸಮಾಜದಲ್ಲಿ ಹೇಗೆ ಸೇರಿಸುವುದು ನಿನ್ನನ್ನು?... ನೀನು ಸತ್ತೆ ಎಂದೇ ನಾವೆಲ್ಲ ಒಪ್ಪಿಕೊಂಡು ಬಿಟ್ಟಿದ್ದೇವೆ...' ಟೀಚರ್ ಹೇಳಿದರು... 'ಅದೆಲ್ಲಾ ಇರಲಿ. ನಿಮಗೆ ಪಳ್ಳಿ ಬೇಕಾ ಬೇಡವಾ ಹೇಳಿ. ಉಳಿದದ್ದು ನನಗೆ ಬಿಡಿ. ನಿಮ್ಮನ್ನು ಕೇಳುವುದು ನನ್ನ ಕರ್ತವ್ಯ ಎಂದು ಕೇಳುತ್ತಿದ್ದೇನೆ. ಪಳ್ಳಿಯಂತಹ ಮಗಳನ್ನು ಪಡೆಯಲು ನೂರು ಜನ್ಮ ಪುಣ್ಯ ಮಾಡಿರಬೇಕು. ಜೀವನದಲ್ಲಿ ಏನೇನೋ ಆಗುತ್ತೆ. ಅದಕ್ಕೇಂತ ಕರುಳ ಸಂಬಂಧ ದೂರ ಮಾಡುತ್ತೀರಲ್ಲ... ಇದು ಸರಿಯೇ?' ಅಣ್ಣ ಹೇಳಿದ, 'ಕರುಳ ಸಂಬಂಧ ಹದಿನಾಲ್ಕು ವರ್ಷಗಳು ಕಳೆದ ನಂತರ ಬಂದು ನಿಂತರೆ ಹೇಗೆ ಸ್ವೀಕರಿಸೋದು? ಅದೂ ಈ ರೀತಿ... ಒಬ್ಬ ಹೆಣ್ಣು ಮಗಳು ಬೇರೆ... ಏನೇನು ಆಗಿರುತ್ತೋ ಯಾರಿಗೆ ಗೊತ್ತು? ಎಲ್ಲಿದ್ದಳು, ಏನು ಮಾಡಿದಳು ಒಂದೂ ತಿಳಿಯದೇ...' ಟೀಚರ್ ಮತ್ತೆ ಕೇಳಿದರು, 'ತಿಳಿದು ನೀವು ಮಾಡುವುದಾದರೂ ಏನು? ಬೇಕೇ ಬೇಡವೇ... ಅಷ್ಟು ಸಾಕು. ಉಳಿದ ಮಾತಿನ ಅವಶ್ಯಕತೆ ಇಲ್ಲ'. ಎಲ್ಲರೂ ಮೌನ. ಟೀಚರ್ ಎದ್ದರು 'ಸರಿ... ಉತ್ತರ ಸಿಕ್ಕಿದೆ. ಇನ್ನು ಇವಳು ನನಗೆ ಸೇರಿದವಳು. ಯಾರಿಗೂ ಇವಳ ಮೇಲೆ ಹಕ್ಕು ಇಲ್ಲ, ಜವಾಬ್ದಾರೀನೂ ಇಲ್ಲ. ಒಪ್ಪಿಗೆ ತಾನೇ?' ಎಂದರು ಕಟುವಾಗಿ. ಎಲ್ಲರ ಮೌನ 'ಹೂಂ' ಅಂದಿತ್ತು.

ಟೀಚರ್ ಜೊತೆ ಅವರ ಮನೆಗೆ ಬಂದೆ. ಅಲ್ಲಿಂದ ಟೀಚರ್ ನನ್ನನ್ನು ತಯಾರು ಮಾಡಿದ್ದರು. ಆಯುರ್ವೇದದ ಎಣ್ಣೆಗಳು, ಔಷಧಿಗಳು, ಕಷಾಯಗಳು... ದೇಹಕ್ಕೆಲ್ಲ ಪ್ರತಿನಿತ್ಯ ಮಾಲಿಷ್ ಮಾಡಿಸುವುದು... ಎರಡು ತಿಂಗಳಲ್ಲಿ ದೇವತೆಯಂತೆ ಕಂಗೊಳಿಸುವಂತೆ ಮಾಡಿದರು. ಯೋಗಾಭ್ಯಾಸ, ಧ್ಯಾನ... ಜೊತೆಗೆ ಭಗವದ್ಗೀತೆ, ಭಾಗವತಗಳನ್ನು ಪ್ರತಿನಿತ್ಯ ಕೇಳಲೇಬೇಕು ಎಂಬ ಕಟ್ಟುಪಾಡುಗಳು... ಹಾಗೇ ನನಗೆ ಓದು ಬರಹ ಕೂಡ ಕಲಿಸಲು ಮೊದಲು ಮಾಡಿದ್ದರು. ಆರಂಭದಲ್ಲಿ ನಿರ್ಲಿಪ್ತಳಾಗಿಯೇ ಪ್ರತಿಕ್ರಿಯಿಸುತ್ತಿದ್ದೆ. ಆದರೆ ಕ್ರಮೇಣ ಮನಸ್ಸು ನನ್ನ ಹಿಡಿತಕ್ಕೆ ಬಂದಿತು. ಸಂದೇಹ ಬಂದಾಗಲೆಲ್ಲ ಆ ಸಾಧುವಿನ ಮುಖ ಕಣ್ಣ ಮುಂದೆ ತಾನೇ ಬರುತ್ತಿತ್ತು 'ಮೈ ಹೂಂ ನ ಭೇಟೀ... ಚಲ್ ಚಲ್... ಫಿಕಲ್ ಮತ್ ಕರೋ...' ಟೀಚರ್ ನನಗೆ ಗೆಜ್ಜೆ ತೋರಿಸಿ ನೃತ್ಯಕ್ಕೆ ಸಜ್ಜು ಮಾಡಿಸಿದರು. ಅವರ ಶಿಷ್ಯೆಯರ ಜೊತೆಯಲ್ಲಿ ನನ್ನದೂ ಥೈ ಥೈ ಪ್ರಾರಂಭ ಆಯಿತು. ಸಾಧ್ಯವೇ ಎನಿಸಿದಾಗ ಒಳಗಿನಿಂದ ಯಾವುದೋ ಹುರುಪು ಬರುತ್ತಿತ್ತು. ಸಾಧ್ಯ ಎನಿಸುವಂತೆ ನಾಲ್ಕೈದು ವರುಷಗಳ ಹಗಲು ರಾತ್ರಿಯ ಸಾಹಸ ಗಾಥೆಯಲ್ಲಿ, ಸತತ ಪ್ರಯತ್ನಗಳಲ್ಲಿ ನಾನು ಮುಂದುವರಿದ ಪರಿಯೇ ಬೇರೆ. ಲೋಕಕ್ಕೆ ಹೊಸ ಪರಿಚಯವಾದೆ ನಾನು. ಬೇರೆ ಬೇರೆ ಕಡೆಗಳಲ್ಲಿ ನನ್ನನ್ನು ಕಳುಹಿಸಿ ನನಗೆ ನೃತ್ಯ ಲೋಕದ ಅನೇಕ ದಿಗ್ಗಜರ ನೆರಳಿನಲ್ಲಿ ಕಲಿಯುವ ಅವಕಾಶ ಕಲ್ಪಿಸಿ ಕೊಟ್ಟ ಮಹಾಚೇತನ ನನ್ನ ಟೀಚರ್. ಸುಮಾರು ಹದಿನೈದು ವರ್ಷಗಳ ನಿರಂತರ ಸಾಧನೆಯಲ್ಲಿ ನನ್ನನ್ನು ಜಗತ್ತು ನೃತ್ಯದೇವತೆ ಎಂದು ಕರೆಯುವಷ್ಟರ ಮಟ್ಟಿಗೆ ಬೆಳೆಸಿದರು. ಅನೇಕಾನೇಕ ಪ್ರಶಸ್ತಿಗಳು ನನ್ನ ಮಡಿಲಿಗೆ ಬಂದು ಬೀಳುತ್ತಿರುವಾಗ ನನಗಿಂತ ಹೆಚ್ಚು ಸಂತಸ ಪಡುತ್ತಿದ್ದವರು ಅವರೇ. ಅಂತಹುದೇ ಒಂದು ಸಂದರ್ಭದಲ್ಲಿ ಅಪ್ಪಅಮ್ಮ, ಅಣ್ಣ ಎಲ್ಲರೂ ಮನೆಗೆ ಬಂದಿದ್ದರು. ಬೇಕಿದ್ದರೆ ನನ್ನನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗಲು ಅಭ್ಯಂತರವಿಲ್ಲ ಎಂಬುದನ್ನು ತಿಳಿಸಲು.

'ಟೀಚರ್‌ಗೆ ವಯಸ್ಸಾಗ್ತ ಇದೆ. ನಿನ್ನನ್ನ ನೋಡಿಕೊಳ್ಳಲು ಕಷ್ಟ ಆಗಬಹುದು. ಬಂದು ಬಿಡು.